೨೧

## ಉದ್ಯಾನ ಇಲಾಖೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ನಂ. ಕವಿವಿ/ಉದ್ಯಾನ/2023-24/162 ದಿನಾಂಕ: 27-12-23

### ಸುತ್ತೋಲೆ

**2023-24 ನೇ ಸಾಲಿನಲ್ಲಿ ಕ.ವಿ.ವಿ ಆವರಣ ಮತ್ತು ಕರ್ನಾಟಕ ಕಾಲೇಜು ಆವರಣದಲ್ಲಿ ಅಪಾಯದಲ್ಲಿರುವ ಮತ್ತು ಕಟ್ಟಡಕ್ಕೆ ತೊಂದರೆಯಾಗಿರುವ ಗಿಡಗಳನ್ನು ಕೊಳ್ಳುವದಕ್ಕೆ ಕೂಟೇಶನ ಸಲ್ಲಿಸುವ ಕುರಿತು**

| ಲಾಟ ಸಂಖ್ಯೆ | ಗಿಡಗಳ ವಿವರಣೆ | ಕೊಟೇಶನ್ ಸಲ್ಲಿಸುವವರು ಸಲ್ಲಿಸಬೇಕಾದ ಡಿಡಿ | ಸುರಕ್ಷಾ ಠೇವಣಿ |
|---|---|---|---|
| 1 | ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಮುಖ್ಯೆ ಕಟ್ಟಡದ ಹಿಂದಿರುವ ರೇನ ಟ್ರೀ-01 ಗಿಡ ಒಟ್ಟು: -01 ಗಿಡ | 500=00 | 1000 |
| 2 | ಕರ್ನಾಟಕ ಕಾಲೇಜು ಆವರಣದಲ್ಲಿರುವ ಜಿಯಾಗ್ರಾಫಿ ವಿಭಾಗದ ಮುಂದಿರುವ ರೇನ ಟ್ರೀ-01 ಮತ್ತು ಪಿ.ಯು ಕಾಲೇಜಿನ ಗೇಟ ಮುಂದಿರುವ ಪೆಲ್ಟೋಪಾರ್ಮ ಗಿಡ-01 ಒಟ್ಟು : 02 ಗಿಡಗಳು | | 1000 |

ಮೇಲೆ ತಿಳಿಸಿದ ಗಿಡಗಳನ್ನು ಕೊಳ್ಳಲು ಇಚ್ಛಿಸುವವರು ರೂ. 500=00 ರೂಪಾಯಿಗಳ ಡಿಡಿಯನ್ನು The Finance Officer, Karnatak University, Dharwad ಇವರ ಹೆಸರಿನಲ್ಲಿ ಪಡೆದು ಡಿಡಿಯನ್ನು ಉದ್ಯಾನ ವಿಭಾಗದಲ್ಲಿ ಸಲ್ಲಿಸಿ ಹೆಸರು ನೊಂದಾಯಿಸಬೇಕು. ದಿನಾಂಕ : **9-1-24** ರಂದು **4.30** ಗಂಟೆಗೆ ಒಳಗಾಗಿ ಕುಲಸಚಿವರ ಕಾರ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಮೇಲೆ ತಿಳಿಸಿದ ಗಿಡಗಳನ್ನು ಚನ್ನಾಗಿ ಗುರುತಿಸಿಕೊಂಡು ಲಿಖಿತ ರೂಪದಲ್ಲಿ ತಮಗೆ ಬೇಕಾದ ಲಾಟಿಗೆ ತಮ್ಮ ವಿಳಾಸ, ಮೋಬೈಲ್ ನಂಬರ ಮತ್ತು ಕಡ್ಡಾಯವಾಗಿ **ಆದಾರ ಜಿರಾಕ್ಸ, ಪ್ಯಾನ ಕಾರ್ಡ ಜಿರಾಕ್ಸ** ಪ್ರತಿಯನ್ನು ಲಗತ್ತಿಸಬೇಕು. ತಾವು ಸಲ್ಲಿಸಲು ಬಯಸುವ ಪ್ರತಿ ಲಾಟಿಗೆ ಪ್ರತ್ತೇಕವಾಗಿ ದರ ನಮೂದಿಸಿ ತಮ್ಮ ಸಹಿಯೊಂದಿಗೆ ಸೀಲು ಮಾಡಿದ ಲಕೂಟೆಯಲ್ಲಿ ನಿಗದಿ ಪಡಿಸಿದ ಬಾಕ್ಸನಲ್ಲಿ ಹಾಕಬೇಕು. **ಪೋಸ್ಟ ಮುಖಾಂತರ ಬಂದ ಪತ್ರಗಳನ್ನು ಸ್ವೀಕರಿಸುವದಿಲ್ಲಾ(ಪರಿಗಣಿಸುವದಿಲ್ಲಾ).** ಸೀಲು ಮಾಡಿದ ಬಾಕ್ಸನ್ನು ದಿನಾಂಕ **9-1-24** ರಂದು ಮುಂಜಾನೆ **11.00 ಗಂಟೆಯಿಂದ ಮಧ್ಯಾಹ್ನ 4.30** ಗಂಟೆಯವರೆಗೆ ಕುಲಸಚಿವರು ಕಾರ್ಯಲಯದಲ್ಲಿ ಇಡಲಾಗುವದು. ಅವದಿ ಮೀರಿ ಬಂದಂತಾ ಕೂಟೇಶನ್‌ಗಳನ್ನು ಸ್ವೀಕರಿಸುವದಿಲ್ಲಾ. ಹೆಸರನ್ನು ನೊಂದಾಯಿಸದೇ ನಿಗದಿ ಪಡಿಸಿದ ಬಾಕ್ಸನಲ್ಲಿ ಕೂಟೇಶನ್ ಸಲ್ಲಿಸಿದವರನ್ನು ಪರಿಗಣಿಸುವದಿಲ್ಲಾ. ತದನಂತರ **4.30** ಗಂಟೆಯ ನಂತರ ಮೇಲಾಧಿಕಾರಿಗಳು ಅನುಮತಿ ನೀಡಿದ ನಂತರ ಅವರ ಸಮ್ಮುಕದಲ್ಲಿ ತೆರೆದು ಕ್ರಮ ಕೈಕೊಳ್ಳಲಾಗುವದು. **ಪೆಟ್ಟಿಗೆ ತೆರೆಯುವ ಸಮಯದಲ್ಲಿ ಬೇಡಿಕೆ ಸಲ್ಲಿಸಿದವರು ಕಡ್ಡಾಯವಾಗಿ ಇರತಕ್ಕದ್ದು.** ಹೆಚ್ಚಿಗೆ ಬೇಡಿಕೆ ಸಲ್ಲಿಸಿದವರ ಹಣ ಮೇಲಾಧಿಕಾರಿಗಳಿಗೆ ಒಪ್ಪಿಗೆಯಾದಲ್ಲಿ ಮಾತ್ರ ಮರುದಿನ ಕಚೇರಿ ಅವಧಿಯೊಳಗೆ ತಮ್ಮ ಬೇಡಿಕೆಯ ಸಂಪೂರ್ಣ ಹಣ ಮತ್ತು ಸುರಕ್ಷಾ ಠೇವಣಿ ಸಂದಾಯಮಾಡಬೇಕು. ಒಂದು ವೇಳೆ ತುಂಬದೆ ಹೋದರೆ ತಾವು ಸಲ್ಲಿಸಿದ ರೂ.500=00 ಡಿಡಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವದು. ಗಿಡಗಳನ್ನು ತೆಗೆದುಕೊಂಡವರು ಕಡ್ಡಾಯವಾಗಿ ಅರಣ್ಯ ಇಲಾಖೆಯ ನಿಯಮದಂತೆ ಸರಕಾರಕ್ಕೆ ತುಂಬಬೇಕಾದ ತೆರಿಗೆಗಳನ್ನು ತುಂಬಿ ಡಿಡಿ ಮತ್ತು ಚಲನ್ ಪ್ರತಿಗಳನ್ನು ಉದ್ಯಾನ ವಿಭಾಗಕ್ಕೆ ಸಲ್ಲಿಸಬೇಕು. ತದನಂತರ ಗಿಡಗಳನ್ನು ಕಟಾವು ಮಾಡಲು ಅನುಮತಿ ಪತ್ರ ನೀಡಲಾಗುವದು. ತದನಂತರ ಅರಣ್ಯ ಇಲಾಖೆಯ ಪಾಸ ಪಡೆದು ಅದರ ಪ್ರತಿ ಉದ್ಯಾನ ವಿಭಾಗಕ್ಕೆ ಸಲ್ಲಿಸಿ ಮಾಲನ್ನು ಸಾಗಿಸಬೇಕು. **ಸದರ ಗಿಡಗಳಿಗೆ ಯೋಗ್ಯ ಧಾರಣಿ ಬಾರದಿದ್ದಲ್ಲಿ ಮೇಲಾಧಿಕಾರಿಗಳು ತೆಗೆದುಕೊಳ್ಳುವ ನಿರ್ಣಯವೇ ಅಂತಿಮ. ಗಿಡಗಳನ್ನು ಕೊಡುವ ಅಥವಾ ನಿರಾಕರಿಸುವ ಹಕ್ಕನ್ನು ಮೇಲಾಧಿಕಾರಿಗಳಿಗೆ ಕಾಯ್ದಿರಿಸಲಾಗಿದೆ.** ಗಿಡಗಳ ವಿಲೇವಾರಿಗೆ ಸಂಬಂದಿಸಿದಂತೆ ಏನಾದರು ಸಮಸ್ಯಗಳಿದ್ದಲ್ಲಿ ಮೇಲಾಧಿಕಾರಿಗಳು ತೆಗೆದುಕೊಳ್ಳುವ ನಿರ್ಣಯವೇ ಅಂತಿಮ. ಪಸಲನ್ನು ತೆಗೆಯುವಾಗ ವಿಶ್ವವಿದ್ಯಾಲಯಕ್ಕೆ ಏನಾದರು ಹಾನಿಯಾದಲ್ಲಿ ತಾವೇ ತುಂಬಿ ಕೊಡಬೇಕು. ಮತ್ತು ಏನಾದರು ಅನಾಹುತವಾದಲ್ಲಿ ತಾವೇ ಜವಾಬ್ದಾರರು. ಪಸಲನ್ನು ಕೊಂಡವರು ಮಾಲನ್ನು ಅವರೇ ಕಾಯ್ದುಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಉದ್ಯಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಲ್ಲಿ ಆಫೀಸಿನ ಸಮಯದಲ್ಲಿ ವಿಚಾರಿಸಬಹುದು. ಮೋಬಾಯಿಲ ನಂ. 8762270302

A. [signature]
ಕುಲಸಚಿವರು.

Scanned with OKEN Scanner